# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 932(1098)
2) ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ ಚುನಾಯಿತರಾದವರು)
3) ಉತ್ತರಿಸಬೇಕಾದ ದಿನಾಂಕ : 12-03-2026
4) ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಗ್ರೂಪ್ 'ಸಿ' ವೃಂದದ ಸಾಮಾನ್ಯ ಜ್ಞಾನ ಪರೀಕ್ಷೆಯ ಕಾಲಾವಧಿ ಎರಡು ಗಂಟೆ ಇದ್ದು, ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಗ್ರೂಪ್ 'ಸಿ' ವೃಂದದ ಸಾಮಾನ್ಯ ಜ್ಞಾನ ಪರೀಕ್ಷೆಯ ಕಾಲಾವಧಿಯು 01 ಗಂಟೆ 30 ನಿಮಿಷ ನಿಗಧಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕಾರಣಕ್ಕಾಗಿ ಒಂದೇ ವೃಂದದ ಪರೀಕ್ಷೆಗಳಿಗೆ ಬೇರೆ-ಬೇರೆ ಕಾಲಾವಧಿ ನಿಗಧಿಪಡಿಸಲಾಗಿದೆ;(ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 43 ಸೇವನೆ 2020, ದಿನಾಂಕ: 05.03.2021ರಲ್ಲಿ ವಿವಿಧ ಗ್ರೂಪ್ 'ಸಿ' ವೃಂದದ ತಾಂತ್ರಿಕ ಮತ್ತು ತಾಂತ್ರಿಕೇತರ ಹುದ್ದೆಗಳಿಗೆ ಸಾಮಾನ್ಯ ಜ್ಞಾನ ಪರೀಕ್ಷಾ ಪಠ್ಯ ಕ್ರಮ ಹಾಗೂ ಪ್ರಶ್ನೆ ಪತ್ರಿಕೆ-1 ಮತ್ತು ಪ್ರಶ್ನೆ ಪತ್ರಿಕೆ-2 ಎರಡಕ್ಕೂ ಗರಿಷ್ಠ ಹಾಗೂ ಕನಿಷ್ಠ ಅಂಕಗಳನ್ನು ಮತ್ತು ಋಣಾತ್ಮಕ ಅಂಕಗಳನ್ನು ನೀಡುವ ಬಗ್ಗೆ ನಿಗದಿಪಡಿಸಲಾಗಿದ್ದು, ಪರೀಕ್ಷಾ ಕಾಲಾವಧಿಯ ಬಗ್ಗೆ ನಿರ್ದೇಶನವಿರುವುದಿಲ್ಲ.<br><br>ಆದ್ದರಿಂದ, **ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸದರಿ ಸಂಸ್ಥೆಯ ನಿಯಮಗಳಂತೆ** ಪರೀಕ್ಷೆಗೆ ಉತ್ತರಿಸಲು 120 ನಿಮಿಷಗಳನ್ನು ನಿಗಧಿಗೊಳಿಸಿರುತ್ತದೆ.<br><br>**ಕರ್ನಾಟಕ ಲೋಕಸೇವಾ ಆಯೋಗವು** ಒಂದು ಸಾಂವಿಧಾನಿಕ ಸಂಸ್ಥೆಯಾಗಿದ್ದು, ಸಾಮಾನ್ಯ ಜ್ಞಾನ ಪತ್ರಿಕೆ -1ಕ್ಕೆ 1 ಗಂಟೆ 30 ನಿಮಿಷಗಳು ಮತ್ತು ಪ್ರಶ್ನೆ ಪತ್ರಿಕೆ-2ಕ್ಕೆ 2 ಗಂಟೆಗಳ ಪರೀಕ್ಷಾ ಅವಧಿಯನ್ನು ನಿಗಧಿಗೊಳಿಸಿರುತ್ತದೆ. |
| ಆ. | ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಗ್ರೂಪ್ 'ಸಿ' ವೃಂದದ ಸಾಮಾನ್ಯ ಜ್ಞಾನ ಪರೀಕ್ಷೆಯ ಕಾಲಾವಧಿಯು 01 ಗಂಟೆ 30 ನಿಮಿಷ ನಿಗಧಿಪಡಿಸಿರುವುದರಿಂದ ಲಕ್ಷಾಂತರ ಸ್ಪರ್ಧಾರ್ಥಿಗಳಿಗೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಮಗಳನ್ನು ವಿವರವಾಗಿ ಮತ್ತು ಸ್ಪಷ್ಟವಾಗಿ ವಿವರಿಸುವುದು; | ಪ್ರತಿ ನಿರ್ದಿಷ್ಟ ಪರೀಕ್ಷೆಯಲ್ಲಿ ಹಾಜರಾಗುವ ಎಲ್ಲಾ ಅಭ್ಯರ್ಥಿಗಳಿಗೆ ಸಮಾನ ಕಾಲಾವಕಾಶ ನೀಡಿರುವುದರಿಂದ ಹಾಗೂ ಈ ವಿಷಯದ ಬಗ್ಗೆ ಯಾವುದೇ ದೂರು/ಆಕ್ಷೇಪಣೆ/ಮನವಿ ಸರ್ಕಾರದಲ್ಲಿ ಸ್ವೀಕೃತವಾಗಿಲ್ಲದಿರುವುದರಿಂದ ಸಾಮಾನ್ಯ ಜ್ಞಾನದ ಪರೀಕ್ಷೆಯ ಕಾಲಾವಧಿಯನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| ಇ. | ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಗ್ರೂಪ್ 'ಸಿ' ವೃಂದದ ಸಾಮಾನ್ಯ ಜ್ಞಾನ ಪರೀಕ್ಷೆಯ ಕಾಲಾವಧಿಯಂತೆ ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಗ್ರೂಪ್ 'ಸಿ' ವೃಂದದ ಸಾಮಾನ್ಯ ಜ್ಞಾನ ಪರೀಕ್ಷೆಯ ಕಾಲಾವಧಿಯನ್ನು ಎರಡು ಗಂಟೆಗಳಿಗೆ ನಿಗಧಿಪಡಿಸಲು ಇರುವ ಅಡಚಣೆಗಳು ಯಾವುವು; ಸಮಯ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವ ಕಾಲಮಿತಿಯೊಳಗೆ ಹೆಚ್ಚಿಸಿ ಆದೇಶ ಹೊರಡಿಸಲಾಗುವುದು; | |

**ಸಂಖ್ಯೆ: ಸಿಆಸುಇ 33 ಎಸ್‌ಎಲ್‌ಎ 2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ